ಮನಸು ದೇಹ ಹಗುರೆನಿಸುತ್ತಿತ್ತು. ಅಲ್ಲಿಲ್ಲಿ ಅವಳ ಕವಿತೆಗಳು ಬೆಳಕು ಕಂಡಿದ್ದವು. ಅವನ್ನು ಅವಳು ನನ್ನೊಡನೆ ಹಂಚಿಕೊಳ್ಳುವಳು. ಮೊದಲಿಗೆ ಈಶಾನ್ಯೆ ಎಂಬ ಹೆಸರು ಇಷ್ಟವಾಗಿತ್ತು ಆಮೇಲೆ ಅವಳ ಕವಿತೆ. ಇದೇ ಜಾಡು ಹಿಡಿದು ಫೇಸ್‌ಬುಕ್ಕಿನಲ್ಲಿ ಜಾಲಿಸಿ ನೋಡಿದಾಗ ಈಶಾನ್ಯೆ ವಿಜಿ ಅಂತ ಹೆಸರಿತ್ತು. ಈ ವಿಜಿ ಯಾರಪ್ಪಾ ಗಂಡನೋ ಅಂತ ಡೀಟೇಲ್ ಜಾಲಿಸುವಿಕೆಗೆ ಇಳಿದಾಗ ಅನ್‌ಮ್ಯಾರೀಡ್ ಅಂತ ಇದ್ದದ್ದು ನೋಡಿ ಉಲ್ಲಸಿತನಾಗಿ ಸಣ್ಣಗೆ ವಿಷಲ್ ಹೊಡೆಯುತ್ತ ಅವಳಿಗೊಂದು ಹಾಯ್ ರವಾನಿಸಿದ್ದೆ. ಅವೊತ್ತಿಗೆ ಅಪ್ಪನಿರುವ ಹೆಣ್ಣಿಗಿಂತ ಗಂಡನಿರುವ ಹೆಣ್ಣಿನ ಸಹವಾಸ ಅಪಾಯಕಾರಿ ಅನಿಸಿತ್ತು. ಆದರೆ ಇವತ್ತು ಲೆಕ್ಕಾಚಾರ ತಪ್ಪಾದಂತಿದೆ. ಗಂಡನಿರುವ ಹೆಣ್ಣು ಅಷ್ಟು ಸುಲಭಕ್ಕೆ ತನ್ನ ಸೇಫ್ ಜೋನ್ ದಾಟಿ ಬರಲಾರಳು. ಆದರೆ ಈಶಾನ್ಯೆ ಪ್ರೇಮದ ಮಾತಾಡುತ್ತಿದ್ದಳು. ಅವಳು ಹೀಗೆ ಭಾವುಕಳಾಗಿ 'ನನಗೆ ನೀವೆ ಎಲ್ಲಾ' ಎಂದು ಬರೆದು ಕಳಿಸುವುದು ಭಯಬೀಳಿಸುತ್ತಿತ್ತು. ಇವೊತ್ತಿಗೂ ಅವಳೆಂದರೆ ಇಷ್ಟವೇ. ಆದರೆ ಮದುವೆಯಾಗುವ ನಾವು ಅಂದು ಬೆಚ್ಚಿಬೀಳಿಸುತ್ತಾಳೆ. ಪ್ರೇಮಕ್ಕೆ ಸೀಮೆ ಇಲ್ಲ, ಅದನ್ನು ದಾಟಿ ಬನ್ನಿ ಅನ್ನುತ್ತಾಳೆ... ಹುಚ್ಚಿ! 'ಸರ್ ಯಾಕೆ ಬೇಸರದಲ್ಲಿ ಕೂತಿದ್ದೀರಿ? ಏನಾಯ್ತು? ಹೀಗೆ ಕೇಳೋದು ಅಸಭ್ಯ ಅಂತ ನಂಗೆ ಗೊತ್ತು. ನೀವು ನನ್ನ ಪ್ರೀತಿಯ ಕತೆಗಾರರು. ನೀವು ಹೀಗೆ ಸುಮ್ಮನೆ ಕೂತಿರೋದು ನೋಡ್ತಿದ್ದರೆ ನಂಗೆ ನಿಜಾ ಬೇಜಾರಾಗ್ತಿದೆ. ಏನು ಹೊಸ ಕತೆ ಬರೆಯೋದರ ಬಗೆ ಏನಾದರೂ ಯೋಚಿಸ್ತಿದೀರಾ? ಹಾಗಿದ್ರೆ ನಾ ನಿಮಗೊಂದು ಕತೆ ಹೇಳತೀನಿ ಕೇಳಿ. ಇದನ್ನ ನೀವು ಬರೆಯಬೇಕೆಂದು ನನ್ನಾಸೆ.' ಅವನು ಸಿಕ್ಕಿದ ಅವಕಾಶ ಕಳಕೋಬಾರದೆಂಬಂತೆ ಮೊದಲು ತೋರಿಸಿದ್ದ ವಿನಯವನ್ನು ಬದಿಗೊತ್ತಿ ಧಾವಂತದಿಂದ ಮಾತಾಡಿದ. ನನಗೆ ಸಿಟ್ಟು ಬಂತು. ಮೊದಲೇ ನಾನು ತಲೆಕೆಡಿಸಿಕೊಂಡು ಕೂತಿದ್ದೆ. ಸಾಲದಕ್ಕೆ ಇವನ ಬೋನಸ್ ಆಫರ್ ಯಾರಿಗೆ ಬೇಕು? 'ರೀ ಸ್ವಾಮಿ, ಮೊದ್ಲು ನೀವ್ಯಾರಂತ ನಂಗೆ ಗೊತ್ತಿಲ್ಲ, ಅದ್ರ ಮೇಲೆ ನಾನೇ ಏನೋ ತಲೆಬಿಸಿಯೊಳಗಿದೀನಿ, ಇದೆಲ್ಲದರ ಮೇಲೆ ನೀವು ಬಂದು ಕತೆ ಬೇರೆ ಹೇಳ್ತೀನಿ ಅಂದರೆ ನನ್ನ ಕೈಲಿ ತಡಕೊಳ್ಳಕ್ಕಾಗಲ್ಲ ಕಣ್ರಿ, ದಯವಿಟ್ಟು ಬೇಡಿ. ಸಾಮಾನ್ಯವಾಗಿ ನಾ ಯಾರ ಕತೆನೂ ಕೇಳೋಕೆ ಹೋಗಲ್ಲ. ಏನೋ ತೋಚಿದ್ದು ಬರೀತೀನಿ. ಕೆಲವು ಕೆಲವರಿಗೆ ಇಷ್ಟವಾಗುತ್ತೆ, ಇನ್ನು ಕೆಲವರಿಗೆ ಇಲ್ಲ ಅಷ್ಟೇ' ಎಂದು ಕೈಮುಗಿದಿದ್ದೆ. ಉಹೂಂ ಆಸಾಮಿ ಜಗ್ಗುವಂತೆ ಕಾಣಲಿಲ್ಲ. 'ಸರ್ ಪ್ಲೀಸ್ ಹಾಗನ್ನಬೇಡಿ, ನಾನು ಈ ಊರಿನವನಲ್ಲ, ಕೊಡಗಿನವನು. ಇನ್ಯಾವಾಗ ಈ ಕಡೆ ಬರ್ತೀನೋ ಗೊತ್ತಿಲ್ಲ. ಬಂದರೂ ನೀವು ಸಿಕ್ತೀರಾ? ಅದಂತೂ ನಿಜಾ ಗೊತ್ತಿಲ್ಲ. ಇನ್ನು ಈ ಕತೆ ಬಹಳ ದಿನಗಳಿಂದ ನನ್ನೊಳಗೆ ಕೊರಿತಾ ಇದೆ ಸರ್. ಇದನ್ನ ಬರೆಯೋಕೆ ಬರುದಾಗಿದ್ರೆ ನಾನೇ ಬರೆದುಬಿಡುವೆ. ಆದ್ರೆ ಸರ್, ತರಕಾರಿ ಇದೆ, ಪಾತ್ರೆ ಇದೆ, ಒಲೆಯಿದೆ, ಮಸಾಲೆಯಿದೆ... ಎಲ್ಲ ಇದ್ದರೂ ಅಡುಗೆ ಮಾಡ್ಲಿಕ್ಕೆ ಬಂದ್ರೆ ತಾನೇ ಸರ್?' ಅನ್ನುತ್ತ ತನ್ನ ಮಾತು ತುಸು ಜಾಣತನದಿಂದ ಕೂಡಿತ್ತೆಂಬಂತೆ ತನ್ನೊಳಗೆ ತಾನೆ ಮೆಚ್ಚುಗೆಯ ನಗು ನಗುತ್ತ ನನ್ನ ಅಪ್ರೂವಲ್‌ಗಾಗಿ ಕಣ್ಣರಳಿಸಿ ಕೂತ. ಅವನ ಮಾತಿಗೆ ನನಗೂ ಸಣ್ಣಗೆ ನಗು ಬಂತು. ಇವನ ಕತೆಯಲ್ಲಿ ಹೆಚ್ಚಿನ ನಿರೀಕ್ಷೆಯೇನಿರದಿದ್ದರೂ ಸುಮ್ಮನೆ ಒಂದು ಹೊಸಕತೆಗೆ ಹೊಳವೇನಾದರೂ ಸಿಗಬಹುದೋ ಅನಿಸಿ ಸುಮ್ಮನೆ ಅವನತ್ತ ನೋಡಿದೆ. ಅವನು ಕಣ್ಣರಳಿಸಿ ನಕ್ಕ. ಅವನ ಆಜಾನುಬಾಹು ದೇಹಕ್ಕೆ ಆ ಎಕ್ಸೈಟ್‌ಮೆಂಟಿನ ನಗು ಅಷ್ಟು ಮ್ಯಾಚ್ ಆಗಲಿಲ್ಲ ಅನಿಸಿ ಅವನ ಬಗ್ಗೆ ಸ್ವಲ್ಪ ಪಾಪವೆನಿಸಿತು. ಬೆಳಗಿನಿಂದ ನನ್ನ ಯೋಚನೆಗಳು ಒಂದೇ ವೃತ್ತದೊಳಗೆ ಸುತ್ತುತ್ತ, ಹೊರಹೋಗಲಾರದೆ ಚಡಪಡಿಸುತ್ತಿರುವ ಹೊತ್ತಿನಲ್ಲಿ ಇದ್ಯಾರೋ ಬಂಧು ನನ್ನನ್ನೊಂದಿಷ್ಟು ಲೇಸಾಗಿಸಲು